# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

(81)

ಸಂ: ಕಂದಾಯ/ಅಪೀಲು/249/12-13 ದಿನಾಂಕ:16-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಅಜಯ್ ಎಂ ಘೋರ್ಪಡೆ ತಂದೆ ಎಂ ವೈ ಘೋರ್ಪಡೆ, ಶಿವಪುರ, ಸಂಡೂರು<br><br>**ಶ್ರೀ ಡಿ. ಮಹೇಂದ್ರನಾಥ , ವಕೀಲರು, ಬಳ್ಳಾರಿ** | 1. ತಹಶೀಲ್ದಾರರು, ಸಂಡೂರು<br>2. ಶ್ರೀ ಬಿ. ವಿ. ಕುಂಟೆ, ಶಿವತೀರ್ಥ, ಮನೆ ನಂ 219, ವಾರ್ಡ್ ನಂ 14, ಪ್ಲಾಟ್ ನಂ 11, ಕೆ. ಹೆಚ್. ಬಿ. ಕಾಲೋನಿ, ಸಂಡೂರು<br>3. ಶ್ರೀ ಶೈಲೇಶ್ ಎಲ್ ದಳವಿ, 1461/ಬಿ. ಗೋಕುಲ್ ವಾಡಿ, ದೇಸಾಯಿ ನಗರ, ಸ್ಯಾಕ್ಲಿಂ, ಗೋವಾ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಂಡೂರು | ಸಂಡೂರು | 168/1 | 1.50 |
| | | 169/1 | 2.49 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು, ಸಂಡೂರು ಇವರ ಆದೇಶ ಸಂ/ಕಂ/ಪಹಣಿ/ಹಬವಿವಾದ/44/2011-12 ದಿನಾಂಕ 25/06/2012 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 12-11-2013, 28-07-2015, ಮತ್ತು 16-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 30-07-2012 ರಂದು ಈ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುತ್ತಾ , ಪ್ರತಿವಾದಿ (1) ರವರ ದಿನಾಂಕ 25-06-2012 ರ ಆದೇಶವನ್ನು ರದ್ದುಗೊಳಿಸಿ ಸಂಡೂರು ತಾಲ್ಲೂಕಿನ ಸಂಡೂರು ಗ್ರಾಮದ ಸ.ನಂ 168/1, 169/1 ಕ್ರಮವಾಗಿ ವಿಸ್ತೀರ್ಣ 1.50 ಮತ್ತು 2.49 ಎಕರೆ ಜಮೀನಿನ ಹಕ್ಕುಬದಲಾವಣೆಯನ್ನು ಶಿವವಿಲಾಸ್ ಟ್ರಸ್ಟ್ ಇವರ ಹೆಸರಿಗೆ ಅಥವಾ ವಾದಿಯ ಹೆಸರಿಗೆ ಹಕ್ಕುಬದಲಾವಣೆ ಮಾಡಿಕೊಟ್ಟಲ್ಲಿ ಕೃಷಿಯೇತರ ಜಮೀನನ್ನಾಗಿ ಪರಿವರ್ತಿಸಿಕೊಂಡು ತದನಂತರ ಶಿವವಿಲಾಸ್ ಟ್ರಸ್ಟ್ ಹೆಸರಿಗೆ ವರ್ಗಾವಣೆ ಮಾಡಲು ಅನುಕೂಲವಾಗುವದರಿಂದ ಪ್ರಸ್ತಾಪಿತ ಜಮೀನುಗಳನ್ನು ವಾದಿಯ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಕೋರಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿವಾದಿ (2) ರವರು ಮೇಲ್ಮನವಿಗೆ ಆಕ್ಷೇಪಣೆಗಳನ್ನು ಸಲ್ಲಿಸುತ್ತಾ ಕೂಡಿಬಾಳುತ್ತಿರುವ ಕುಟುಂಬವನ್ನು ಒಡೆಯಲು ಅವಕಾಶಕೊಡದೆ, ದಿವಂಗತ ರಾಜಮಾತೆ ಶ್ರೀಮತಿ ಸುಶೀಲದೇವಿ ಘೋರ್ಪಡೆಯವರ ಮೃತ್ಯು-ಪತ್ರ ದ

ಪ್ರಕಾರ ಅವರ ಪಿತಾರ್ಜಿತ ಆಸ್ತಿಯನ್ನು ನಿರ್ವಹಿಸಿಕೊಂಡು ಸಂರಕ್ಷಿಸಿಕೊಳ್ಳಲು ವಾದಿಸಮೇತ ಎಲ್ಲಾ ವಾರಸುದಾರರಿಗೆ ನ್ಯಾಯಯುತವಾದ ಸಮಾನದಹಕ್ಕು ಮತ್ತು ಅಧಿಕಾರವನ್ನು ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ.

ಪ್ರಕರಣವು ಮೃತ್ಯು-ಪತ್ರ ಆಧರಿಸಿ ಹಕ್ಕುದಾಖಲೆ ಮಾಡಿಕೊಡಲು ಕೊಡಲು ಕೋರಿದ್ದು, ಶ್ರೀ ವೈ ಆರ್ ಘೋರ್ಪಡೆ ಇವರು ಮಾಡಿರುವ ದಿನಾಂಕ 09-12-1972 ರ ವಿಲ್ ನ ಸಿಂಧುತ್ವ ಹಾಗೂ ಶ್ರೀಮತಿ ಸುಶೀಲದೇವಿ ಇವರು ಮಾಡಿರುವ ದಿನಾಂಕ 11-05-2010 ರ ವಿಲ್ ಸಿಂಧುತ್ವದ ಬಗ್ಗೆ ಇದ್ದು, ಇಂತಹ ಪ್ರಕರಣಗಳಲ್ಲಿ ವಿವಾದ ಉಂಟಾದಾಗ ಸದರಿ ವಿವಾದಗಳ ಕುರಿತು ನಿರ್ಧಾರಮಾಡುವ ವ್ಯಾಪ್ತಿ ಕಂದಾಯ ನ್ಯಾಯಾಲಯಗಳಿಗೆ ವ್ಯಾಪ್ತಿ ಇಲ್ಲದಿರುವುದರಿಂದ ಹಸ್ತಕ್ಷೇಪ ಮಾಡಬಾರದೆಂದು ನಿರ್ಧರಿಸಿ, ಮೇಲ್ಮನವಿಯನ್ನು ಈ ಹಂತದಲ್ಲಿಯೇ ವಜಾಗೊಳಿಸಿ ಆದೇಶಿಸುವ ಈ ಕೆಳಕಂಡ ಆದೇಶ.

## :: ಆದೇಶ ::

**ಮೇಲ್ಮನವಿಯನ್ನು ವಜಾಗೋಳಿಸಿದೆ.**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ತಹಶೀಲ್ದಾರರು ಸಂಡೂರು ಇವರ ಆದೇಶ ಸಂಖ್ಯೆ ಕಂ/ಪಹಣಿ/ಹಬವಿವಾದ/44/2011-12 ದಿನಾಂಕ 25-06-2012 ರ ಆದೇಶವನ್ನು ಎತ್ತಿಹಿಡಿದೆ. ಸಂಡೂರು ತಾಲ್ಲೂಕಿನ ಸಂಡೂರು ಗ್ರಾಮದ ಸ.ನಂ 168/1, 169/1 ವಿಸ್ತೀರ್ಣ ಕ್ರಮವಾಗಿ 1.50, 2.49 ಎಕರೆ ಜಮೀನಿಗೆ ಸಂಬಂಧಿಸಿದಂತೆ ಮೇಲ್ಮನವಿಯನ್ನು ವಜಾ ಮಾಡಿ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ: 16-08-2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

**ಪ್ರತಿಯನ್ನು :** ತಹಶೀಲ್ದಾರರು ಸಂಡೂರು ಇವರಿಗೆ ಮೂಲಕಡತ ಸಂಖ್ಯೆ ಕಂ/ಪಹಣಿ/ಹಬ ವಿವಾದ/45/11-12 ದಿನಾಂಕ 25-06-2012 ರ ಮೂಲ ಕಡತವನ್ನು ಕಳುಹಿಸಿದೆ.